ಅದರ ವ್ಯವಸ್ಥೆ ಮಾಡಿಕೊಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಕೆ.ಎಂ. ಶೀವಲಿಂಗೇಗೌಡ : ಮಾನ್ಯ ಸಚಿವರು ಹೇಳಿದ್ದಾರೆ, ಸಂತೋಷ. ವೈದ್ಯರುಗಳನ್ನು ನೇಮಿಸಲು ಒಂದು ತಿಂಗಳ ಸಮಯಾವಕಾಶ ತೆಗೆದುಕೊಂಡಿದ್ದಾರೆ. ಅವರು ವೈದ್ಯರುಗಳನ್ನು ನೇಮಿಸಿದಲ್ಲಿ, ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಅಧ್ಯಕ್ಷರೆ, ಇಂತಹುದೇ ಪ್ರಶ್ನೆಯನ್ನು ನಾನು ಕಳೆದ ವರ್ಷ ಕೇಳಿದ್ದೆ. ಆದರೆ, ಇನ್ನೂ ಆಗಿಲ್ಲ.

ಅಧ್ಯಕ್ಷರು : ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ.

ಪ್ರಶ್ನೆ ಸಂಖ್ಯೆ : 109 (1470)

ಅಧ್ಯಕ್ಷರು : ಮಾನ್ಯ ತನ್ವೀರ್ ಸೇಠ್‌ರವರೆ, ನಿಮ್ಮ ಪ್ರಶ್ನೆಗೆ ಮಾನ್ಯ ಕಾರ್ಮಿಕ ಸಚಿವರು ಸಮಯ ಕೇಳಿದ್ದಾರೆ.

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ಯೋಜನೆಯಡಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮ ಇದಾಗಿದೆ. ಸುಮಾರು 32 ಐಟಿಐಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ ಎಂಬ ಪ್ರಶ್ನೆ ಕೇಳಿದ್ದೇನೆ.

ಅಧ್ಯಕ್ಷರು : ಈ ಕುರಿತಾದ ಉತ್ತರ ಇಲ್ಲದೆ ಹೇಗೆ ಪ್ರಶ್ನೆ ಕೇಳುತ್ತೀರಿ?

ಶ್ರೀ ತನ್ವೀರ್ ಸೇಠ್ : ನನ್ನ ಹತ್ತಿರ ಮಾಹಿತಿ ಇದೆ. ಮಾನ್ಯ ಮಂತ್ರಿಗಳ ಹತ್ತಿರವೂ.....

ಅಧ್ಯಕ್ಷರು : ಉತ್ತರ ಬರಬೇಕಲ್ಲ.

(ಶ್ರೀ ಚಂದ್ರಕಾಂತ್ ಗುರಪ್ಪ ಬೆಲ್ಲದ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಛೇರ್ಮನ್‌ರವರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಬಹಳಷ್ಟು ಮಾಹಿತಿಗಳು ಬೇಕಾಗುತ್ತದೆ. ಸಾಕಷ್ಟು ಮಾಹಿತಿಗಳನ್ನು ತಾವೂ (ತನ್ವೀರ್ ಸೇಠ್) ಕೇಳಿದ್ದೀರಿ. 2005–06 ರಿಂದ ಪ್ರಾರಂಭಗೊಂಡಿರುವ ಎಲ್ಲಾ 36 COE institutions ಏನಿವೆ, ಇವುಗಳಿಗೆ ನಾವು ಎಷ್ಟು ಹಣ ಕೊಟ್ಟಿದ್ದೇವೆ,

ಯಾವ್ಯಾವ domestic funding ಇವೆ? World Bank Funding ಏನು ಇದೆ? ಈ ತರಹ ನಾನಾ ವಿವರಗಳನ್ನು ಕೊಡಬೇಕಾಗುತ್ತದೆ. ಅದಕ್ಕೋಸ್ಕರ ಸ್ವಲ್ಪ ಸಮಯ ಕೇಳಿದ್ದೇವೆಯೇ ಹೊರತು.....ಉದಾಹರಣೆಗೆ, ಮೆಷಿನರಿಗೆ ಎಷ್ಟು ಹಣ ಕೊಟ್ಟಿದ್ದೇವೆ, building construction ಗೆ ಎಷ್ಟು ಹಣ ಕೊಟ್ಟಿದ್ದೇವೆ, ಯಾರ್ಯಾರಿಗೆ ಹಣ ಬಿಡುಗಡೆ ಮಾಡಲಾಗಿದೆ, ಈ ತರಹದ ಸಾಕಷ್ಟು ಮಾಹಿತಿಗಳು ಬೇಕಾಗುತ್ತದೆ. ಇದೆಲ್ಲವನ್ನು ನಾವು ಸದನದಲ್ಲಿ ಹೇಳಬೇಕಾಗಿರುವುದರಿಂದ ಸಮಯ ಕೇಳಿದ್ದೇವೆ. ನನಗೂ ಆ ರೀತಿ ಹೇಳಲು ಬರುತ್ತದೆ. ಆದರೆ, ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ತಾವೂ ಹಿಂದೆ ಸಚಿವ ರಾಗಿದ್ದಿರಿ. ತಮ್ಮ ಹತ್ತಿರವೂ ಇದರ ಮಾಹಿತಿ ಇರಬಹುದು. I am not evading to answer it.

SRI QAMARUL ISLAM : I was also a labour minister. He ois also labour minister. This Center of Excellence was started during my period. 32 I.T.I.S are getting 2½ to 3 crore rupees from Government of India. Government of Karnataka has utilized that amount. The very important point is, as an Engineer I am telling you sir, Electrical sector and Automobile sector. Electrical trade has to be upgraded.

It has got 4 subjects. Because of Centre of Excellence it will be having six subjects including Computers as well as English. It has to be upgraded. I wanted to know why the Government has failed to see to get the degree certificate to those who have passed from the Centre of Excellence. No recruitment has taken place. ಏನು ಸಾರ್ ಇದು? It is a policy decision. Other things are all right. I can understand. You can take it for discussion. ಇದು ಸಣ್ಣ question ಅಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಇದರ ಬಗ್ಗೆ ಸಮಯ ಕೇಳಿದ್ದೇವೆ. ಹೆಚ್ಚಿನ ಮಾಹಿತಿ ಬೇಕಾಗುತ್ತದೆ. ಆದ್ದರಿಂದ ಸಮಯ ಕೇಳಿದ್ದೇವೆ.

ಛೇರ್ಮನ್ : ಸಮಯ ಕೇಳಿದ್ದಾರೆ. ಸಮಯ ಕೊಡೋಣ.

ಶ್ರೀ ತನ್ವೀರ ಸೇಠ್ : ಇದರಲ್ಲಿ ಲೋಪವಾಗಿರುವುದು ಮೇಲು ನೋಟಕ್ಕೆ ಎದ್ದು ಕಾಣುತ್ತಿದೆ. ಆದ್ದರಿಂದ, ಈ ವಿಚಾರದ ಬಗ್ಗೆ ಸದನದ ಸಮಿತಿಗೆ ಹಾಕಿ. ಅಲ್ಲಿ ಬೇಕಾದರೆ ಚರ್ಚೆ ಮಾಡಿ ಏನಾಗಿದೆ, ಏನು ಆಗಿಲ್ಲ

ಎಂಬ ಬಗ್ಗೆ ನಿಮಗೆ ನಾವೇ ಮಾಹಿತಿ ಕೊಡುತ್ತೇವೆ. ಇಲ್ಲದಿದ್ದರೆ ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಹಾಕಿ.

ಶ್ರೀ ಬಿ.ಎನ್. ಬಚ್ಚೇಗೌಡ : ಅರ್ಧ ಗಂಟೆ ಚರ್ಚೆಗೆ ಹಾಕಿ.

ಛೇರ್ಮನ್ : ಅರ್ಧ ಗಂಟೆ ಚರ್ಚೆಗೆ ಹಾಕಲು ಒಪ್ಪಿದ್ದಾರೆ. ಆಯಿತು.

ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳ ಬಗ್ಗೆ

110 (1147) ಶ್ರೀ ಮಹದೇವ ಪ್ರಸಾದ್.ಹೆಚ್.ಎಸ್(ಗುಂಡ್ಲುಪೇಟೆ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಇದುವರೆವಿಗೂ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ; (ವರ್ಷಾವಾರು ಮಾಹಿತಿಯನ್ನು ಒದಗಿಸುವುದು);

ಆ) ಹಾಗಿದ್ದಲ್ಲಿ ಫಲಾನುಭವಿಗಳ ಪೈಕಿ ಎಷ್ಟು ಜನರಿಗೆ ಬಾಂಡ್ ವಿತರಿಸಲಾಗಿದೆ, ಎಷ್ಟು ಬಾಕಿ ಇದೆ;

ಇ) ಹಾಗಿದ್ದಲ್ಲಿ ಈಗಾಗಲೇ ವಿತರಿಸಲಾಗಿರುವ ಬಾಂಡ್‌ಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ;

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಭಾಗ್ಯಲಕ್ಷ್ಮಿ ಯೋಜನೆಯಡಿ ಇದುವರೆವಿಗೂ 9,49,167 ಫಲಾನುಭವಿಗಳನ್ನು ಗುರುತಿಸಲಾಗಿದೆ. ವರ್ಷಾವಾರು ಮಾಹಿತಿಯು ಕೆಳಕಂಡಂತಿದೆ.

ವರ್ಷ	ಫಲಾನುಭವಿಗಳ ಸಂಖ್ಯೆ
2006–07	1,66,728
2007–08	1,33,934
2008–09	4,17,042
2009–10	2,31,463
ಒಟ್ಟು	**9,49,167**